ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **17.01.2024**

ಮುಂದುವರಿದ ಪಾಟಿ ಸವಾಲುಃ ಶ್ರೀ ಪಿ ಕೆ ಜಿ ವಕೀಲರಿಂದ

ನನ್ನ ಅಕ್ಕ 2 ನೇ ವಾದಿ ಪುಷ್ಪವತಿ ಅವಿವಾಹಿತೆ. ನಿಪಿ 1 ರಲ್ಲಿ ತೋರಿಸಿರುವಂತೆ ಸರ್ವೆ ನಂ 18/1 ರಲ್ಲಿ ನನ್ನ ತಾತ ಬಿದ್ದಪ್ಪ ಖರೀದಿಸಿದ 7 ಏಕರೆ 56 ಸೆಂಟ್ ಹಾಗೂ ಹೊಲ 65 ಸೆಂಟ್ ಜಾಗ ಈಗಲೂ ನಮ್ಮ ಕುಟುಂಬದ ಸ್ವಾಧೀನದಲ್ಲಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸೊತ್ತಿನಲ್ಲಿ ನನ್ನ ಅಜ್ಜ ಬಿದ್ದಪ್ಪ ಹಾಗೂ ಅವರ ತಮ್ಮ ಪೊನ್ನಪ್ಪನವರ ನಡುವೆ ವಿಭಾಗವಾಗಿರುತ್ತದೆ . ಪೊನ್ನಪ್ಪನವರ ಭಾಗಕ್ಕೆ ಹೋದ ಸೊತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಪೊನ್ನಪ್ಪನವರ ಮಗ ಮೊಣ್ಣಪ್ಪ ಈಗಲೂ ಸಹ ಜೀವಂತ ಇದ್ದಾರೆ . ನಮ್ಮ ತಾತ ಮತ್ತು ಅವರ ತಮ್ಮನ ನಡುವೆ ವಿಭಾಗವು ಬರವಣಿಗೆ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಪೊನ್ನಪ್ಪನವರ ಭಾಗಕ್ಕೆ ಹೋದ ಸೊತ್ತಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

ರಂಗಸಮುದ್ರದಲ್ಲಿ ನಾವು ಸುಮಾರು 27-28 ವರುಷಗಳಿಂದ ವಾಸವಿರುವುದಿಲ್ಲ. 1 ನೇ ಪ್ರತಿವಾದಿ ವಾಸವಿರುವ ಮನೆಯನ್ನು ಅವರ ಗಂಡ ಅಂದರೆ ಮೋಹನ್ ರಾಜ್ ರವರು ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಮೋಹನ್ ರಾಜ್ ನನ್ನ ಅಣ್ಣ . ಸದರಿ ಮನೆ ಇರುವ ಜಾಗ ಮೋಹನ್ ರಾಜ್ ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಮನೆ ಇರುವ ಜಾಗ ಯಾವ ಸರ್ವೆ ನಂಬರ್ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನಾವು ಅತಿಥಿಯಾಗಿ ಮನೆಗೆ ಹೋಗಲು ನಮ್ಮನ್ನು ಕರೆದಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಎ ಸೊತ್ತಿನಲ್ಲಿರುವ ಸರ್ವೆ ನಂ 18/9 ಹಾಗೂ ಬಿ ಸೊತ್ತಿನ ಸರ್ವೆ ನಂ 20/3 ಪಿ1 ಒಂದನೇ ಪ್ರತಿವಾದಿ ಹೆಸರಿನಲ್ಲಿದ್ದು ಅದಕ್ಕೆ ಅವರೇ ಮಾಲೀಕರಾಗಿರುವುದರಿಂದ ಸದರಿ ಸೊತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಸೊತ್ತುಗಳು ಮೋಹನ್ ರಾಜ್ ರವರ ಸ್ವಯಾರ್ಜಿತ ಸೊತ್ತು ಆದ ಕಾರಣ ಅದರ ಖಾತೆ 1 ನೇ ಪ್ರತಿವಾದಿಗೆ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ಸದರಿ ಸೊತ್ತುಗಳನ್ನು ಮೋಹನ್ ರಾಜ್ ರವರು ದಿ 25-01-1984 ರಲ್ಲಿ ಸ್ವಂತ ದುಡಿಮೆಯಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ

ಸರಿಯಲ್ಲ. ಸರ್ವೆ ನಂ 18/1 ಹಾಗೂ ಸರ್ವೆ ನಂ 20/3 ಪಿ 2 ನಮ್ಮ ಅಜ್ಜಿ ಚಿನ್ನಮ್ಮನವರಿಗೆ ಮಕ್ಕಳಿಲ್ಲದ ಕಾರಣ ನನ್ನ ಅಣ್ಣ ಮೋಹನ್ ರಾಜ್‌ರವರಿಗೆ ಅವರು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ದಾವಾ ಸೊತ್ತುಗಳ ಮೇಲೆ ನಮಗೆ ಪಾಲಿನ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರಿಂದ 6 ರವರಿಗೆ ಈ ದಾವಾ ಸೊತ್ತುಗಳಲ್ಲಿ ಯಾವುದೇ ಪಾಲುದಾರಿಕೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಿಪಿ 5 ನ್ನು ತಯಾರಿಸಲು ನಾನು ಒಬ್ಬಳೇ ಸೂಚನೆ ನೀಡಿರುತ್ತೇನೆ . ದಾವಾ ಸೊತ್ತನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ 5 ನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ನಮ್ಮ ತಾತ ಬಿದ್ದಪ್ಪನಿಗೆ ಮತ್ತೊಬ್ಬ ಹೆಂಡತಿ ಇದ್ದ ಬಗ್ಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ನಾವು ಬಿದ್ದಪ್ಪ ಹಾಗೂ ದೇವಮ್ಮನವರ ಪೀಳಿಗೆಯವರು ಎಂದರೆ ಸರಿಯಲ್ಲ.

ಪಾಟಿ ಸವಾಲು ಪ್ರತಿವಾದಿ 3 ರಿಂದ 6 ರವರ ಪರ ವಕೀಲರು ಸಮಯವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.